ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮ, 1959

**(ಕರ್ನಾಟಕ ಅಧಿನಿಯಮ ಸಂಖ್ಯೆ 3)**

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ

**1989**

# ಕರ್ನಾಟಕ ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮ, 1959

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ಕ್ರಮಾಂಕ ಲಾ 61 ಎಲ್‌ಎಂಪಿ 82, ಬೆಂಗಳೂರು, ದಿನಾಂಕ:..........**

ಕರ್ನಾಟಕ ರಾಜ್ಯಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 26)ರ 5ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ನಾನು, ಶ್ರೀ ಎ.ಎನ್. ಬ್ಯಾನರ್ಜಿ, ಬೆಂಗಳೂರು, ಕರ್ನಾಟಕ ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮ, 1959 ಮತ್ತು ಅದರ ಮೇರೆಗಿನ ನಿಯಮಗಳು ಮತ್ತು ಅಧಿಸೂಚನೆಗಳ (ಕರ್ನಾಟಕ ಅಧಿನಿಯಮ 1960ರ 3) ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಎ.ಎನ್. ಬ್ಯಾನರ್ಜಿ**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಲಿಂಗಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ, (ಆಡಳಿತ–2)

**ಕಾನೂನು ಇಲಾಖೆ**

**ಕರ್ನಾಟಕ ಅಧಿನಿಯಮ, 1960ರ 3**

**(ಕರ್ನಾಟಕ ರಾಜ್ಯಪತ್ರದಲ್ಲಿ 1960ರ ಫೆಬ್ರುವರಿ ನಾಲ್ಕನೇ ದಿನದಂದು ಮೊದಲು ಪ್ರಕಟಿತವಾಗಿದೆ)**

# ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಅಧಿನಿಯಮ, 1959

**1960ರ ಜನವರಿ ಇಪ್ಪತ್ತೇಳನೆಯ ದಿನದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆದಿದೆ)**

ಕರ್ನಾಟಕ ರಾಜ್ಯದ ಹಿಂದೂ ದೇವಾಲಯಗಳಲ್ಲಿ ಅಥವಾ ಅವುಗಳ ಆವರಣಗಳೊಳಗೆ ಪ್ರಾಣಿಬಲಿಗಳನ್ನು ಪ್ರತಿಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದ ಹಿಂದೂ ದೇವಾಲಯಗಳಲ್ಲಿ ಅಥವಾ ಅವುಗಳ ಆವರಣಗಳೊಳಗೆ ನಡೆಯುವ ಪ್ರಾಣಿಬಲಿಗಳನ್ನು ಪ್ರತಿಬಂಧಿಸುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹತ್ತನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಅಧಿನಿಯಮ, 1959 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ತತ್‌ಕ್ಷಣವೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:-** ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,-

(ಕ) "ಪ್ರಾಣಿ" ಎಂಬುದು ಪಕ್ಷಿಗಳನ್ನು ಒಳಗೊಳ್ಳುತ್ತದೆ.

(ಖ) ದೇವಾಲಯಕ್ಕೆ ಸಂಬಂಧಿಸಿದ "ಆವರಣಗಳು" ಎಂಬುದು ದೇವಾಲಯದ ಸಮೀಪದಲ್ಲಿರುವ, ದೇವಾಲಯಕ್ಕೆ ಸೇರಿರುವ ಅಥವಾ ಸೇರದಿರುವ, ಒಳಗೆ ಅಥವಾ ಹೊರಗೆ ನಡೆಸಲಾಗುವ ಪೂಜೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ಸಾಮಾನ್ಯವಾಗಿ ಉಪಯೋಗಿಸಲಾಗುವ ಮತ್ತು ವಿಶೇಷವಾಗಿ, ದೇವಾಲಯದ ಮಂಟಪಗಳ, ಪ್ರಾಕಾರಗಳ, ಹಿಂದಿನ ಅಂಗಣಗಳ ಮತ್ತು ಮುಂದಿನ ಅಂಗಣಗಳ ಅವುಗಳನ್ನು ಯಾವುದೇ ಹೆಸರಿನಿಂದ ಕರೆಯಲಿ ಎಲ್ಲ ಭೂಮಿಗಳನ್ನು ಮತ್ತು ಕಟ್ಟಡಗಳನ್ನು ಮತ್ತು ತೇರು ಸಾಮಾನ್ಯವಾಗಿ ನಿಂತಿರುವ ಜಾಗವನ್ನೂ ಸಹ ಒಳಗೊಳ್ಳುತ್ತದೆ;

(ಗ) "ಬಲಿ" ಎಂದರೆ, ಯಾವುದೇ ದೇವತೆಯನ್ನು ಒಲಿಸಿಕೊಳ್ಳುವ ಉದ್ದೇಶಕ್ಕಾಗಿ ಅಥವಾ ಆ ಆಶಯದಿಂದ ಯಾವುದೇ ಪ್ರಾಣಿಯನ್ನು ಕೊಲ್ಲುವುದು ಅಥವಾ ಅಂಗವಿಕಲಗೊಳಿಸುವುದು;

(ಘ) "ದೇವಾಲಯ" ಎಂದರೆ, ಸಾರ್ವಜನಿಕ ಧಾರ್ಮಿಕ ಪೂಜಾ ಸ್ಥಳವಾಗಿ ಉಪಯೋಗಿಸಲಾಗುತ್ತಿರುವ ಮತ್ತು ಹಿಂದೂ ಸಮುದಾಯಕ್ಕೆ, ಅಥವಾ ಅದರ ಯಾವುದೇ ಪಂಗಡಕ್ಕೆ ಅಥವಾ ಅದರ ಪ್ರಯೋಜನಕ್ಕಾಗಿ ಸಮರ್ಪಿತವಾಗಿರುವ ಅಥವಾ ಹಿಂದೂ ಸಮುದಾಯವು ಅಥವಾ ಅದರ ಯಾವುದೇ ಪಂಗಡವು ಸಾರ್ವಜನಿಕ ಧಾರ್ಮಿಕ ಪೂಜಾಸ್ಥಳವಾಗಿ ಹಕ್ಕಿನಿಂದ ಉಪಯೋಗಿಸಲಾಗುತ್ತಿರುವ, ಯಾವುದೇ ಹೆಸರಿನಿಂದ ಕರೆಯಲಾಗುವ ಸ್ಥಳ, ಮತ್ತು ಇದು ಅಂಥ ಸ್ಥಳಕ್ಕೆ ಹೊಂದಿಕೊಂಡಿರುವ ಉಪ ಪೂಜಾ ಮಂದಿರಗಳನ್ನು ಹಾಗೂ ಮಂಟಪಗಳನ್ನು ಒಳಗೊಳ್ಳುತ್ತದೆ.

**3. ದೇವಾಲಯದಲ್ಲಿ ಅಥವಾ ಅದರ ಆವರಣಗಳಲ್ಲಿ ಬಲಿಯನ್ನು ಪ್ರತಿಬಂಧಿಸಲಾಗಿದೆ.–** ಯಾವುದೇ ದೇವಾಲಯದಲ್ಲಿ ಅಥವಾ ಅದರ ಆವರಣಗಳೊಳಗೆ ಅಥವಾ ದೇವತೆಯನ್ನು ತೇರಿನಲ್ಲಿ ಅಥವಾ ಬೇರೆ ರೀತಿಯ ಮೆರವಣಿಗೆಯಲ್ಲಿ ಒಯ್ಯುತ್ತಿರುವಾಗ, ಅಂಥ ತೇರಿನ ಅಥವಾ ಅಂಥ ದೇವತೆಯ ಸಮೀಪದಲ್ಲಿ ಯಾವುದೇ ಪ್ರಾಣಿಯನ್ನು ಯಾವನೇ ವ್ಯಕ್ತಿಯು ಬಲಿ ಕೊಡತಕ್ಕದ್ದಲ್ಲ.

**4. ಬಲಿ ಕೊಡುವಲ್ಲಿ ಪೌರೋಹಿತ್ಯ ಮಾಡುವುದುನ್ನು ಪ್ರತಿಬಂಧಿಸಲಾಗಿದೆ.–** ಯಾವನೇ ವ್ಯಕ್ತಿಯು ದೇವಾಲಯದಲ್ಲಿ ಅಥವಾ ಅದರ ಆವರಣಗಳಲ್ಲಿ ಅಥವಾ, ತೇರಿನ ಅಥವಾ ದೇವತೆಯ ಸಮೀಪದಲ್ಲಿ ಯಾವುದೇ ಬಲಿಯನ್ನು ಕೊಡುವಲ್ಲಿ–

(ಕ) ಪೌರೋಹಿತ್ಯ ಮಾಡತಕ್ಕದ್ದಲ್ಲ ಅಥವಾ ಪೌರೋಹಿತ್ಯವನ್ನು ಮಾಡಲು ಮುಂದೆ ಬರತಕ್ಕದ್ದಲ್ಲ, ಅಥವಾ

(ಖ) ನಡೆಸತಕ್ಕದ್ದಲ್ಲ ಅಥವಾ ನಡೆಸಲು ಮುಂದೆ ಬರತಕ್ಕದ್ದಲ್ಲ; ಅಥವಾ

(ಗ) ಸೇವೆ ಸಲ್ಲಿಸತಕ್ಕದ್ದಲ್ಲ, ನೆರವಾಗತಕ್ಕದ್ದಲ್ಲ ಅಥವಾ ಬಾಗವಹಿಸತಕ್ಕದ್ದಲ್ಲ ಅಥವಾ ಸೇವೆ ಸಲ್ಲಿಸಲು, ನೆರವಾಗಲು, ಅಥವಾ ಭಾಗವಹಿಸಲು ಮುಂದೆ ಬರತಕ್ಕದ್ದಲ್ಲ.

**5. ದೇವಾಲಯವನ್ನು ಅಥವಾ ಅದರ ಆವರಣಗಳನ್ನು ಬಲಿಗಾಗಿ ಉಪಯೋಗಿಸಲು ಅವಕಾಶ ಕೊಡತಕ್ಕದ್ದಲ್ಲ:–** ಯಾವನೇ ವ್ಯಕ್ತಿಯು.

(ಕ) ಯಾವುದೇ ದೇವಾಲಯದೊಳಗೆ ಅಥವಾ ಆವರಣದೊಳಗೆ ಇರುವ, ಮತ್ತು

(ಖ) ತನ್ನ ಸ್ವಾಧೀನದಲ್ಲಿ ಅಥವಾ ತನ್ನ ನಿಯಂತ್ರಣದಲ್ಲಿ ಇರುವ, ಯಾವುದೇ ಸ್ಥಳದಲ್ಲಿ, ಬಲಿಯನ್ನು ಕೊಡಲು ತಿಳಿದೂ ತಿಳಿದೂ ಅವಕಾಶವನ್ನು ಕೊಡತಕ್ಕದ್ದಲ್ಲ.

**6. ದಂಡಗಳು:–** (1) 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

(2) 4ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಐದುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

ಪರಂತು, ಅಪರಾಧಿಯು ದೇವಾಲಯದ ಅಧಿಕಾರಿ, ನೌಕರ, ಪ್ರಾಧಿಕಾರ, ನ್ಯಾಸಧಾರಿ ಅಥವಾ ಪೂಜಾರಿ ಆಗಿದ್ದರೆ, ಅಥವಾ ಪದಾಧಿಕಾರಿಯಾಗಿದ್ದು ದೇವಾಲಯದಲ್ಲಿ ಯಾವುದೇ ಸೇವೆಯನ್ನು ಸಲ್ಲಿಸುವುದಕ್ಕಾಗಿ ಉಪಲಬ್ಧಿಗಳನ್ನು ಅಥವಾ ಪರಿಲಬ್ದಿಗಳನ್ನು ಸ್ವೀಕರಿಸುತ್ತಿದ್ದರೆ, ಅವನು ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳ ವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) 5ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ, ಅಥವಾ ಮೂರುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**ವಿವರಣೆ.–** 3ನೇ ಪ್ರಕರಣವನ್ನು, 4ನೇ ಪ್ರಕರಣವನ್ನು ಅಥವಾ 5ನೇ ಪ್ರಕರಣವನ್ನು ಉಲ್ಲಂಘಿಸಲು ಪ್ರಯತ್ನಿಸುವ ಅಥವಾ ಉಲ್ಲಂಘನೆಗೆ ದುಷ್ಪ್ರೇರಿಸುವ ಅಥವಾ ದುಷ್ಪ್ರೇರಿಸಲು ಪ್ರಯತ್ನಿಸುವ ಯಾವನೇ ವ್ಯಕ್ತಿಯು, ಸದರಿ ಪ್ರಕರಣವನ್ನು ಉಲ್ಲಂಘಿಸಿದ್ದಾನೆಂದು ಭಾವಿಸತಕ್ಕದ್ದು.

**7. ವಾರಂಟಿಲ್ಲದ ದಸ್ತಗಿರಿ ಮಾಡುವ ಬಗ್ಗೆ ಸಾಮಾನ್ಯಾಧಿಕಾರ:–** ಸಬ್ ಇನ್ಸ್‌ಪೆಕ್ಟರನ ದರ್ಜೆಗೆ ಕಡಿಮೆಯಿಲ್ಲದ ಯಾವನೇ ಪೊಲೀಸ್ ಅಧಿಕಾರಿಯು ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯನ್ನು ವಾರೆಂಟಿಲ್ಲದೆ ದಸ್ತಗಿರಿ ಮಾಡಬಹುದು.

**8. ನಿಯಮ ರಚನಾಧಿಕಾರ:–** (1) ಈ ಅಧಿನಿಯಮದ ಉಪಬಂಧಗಳನ್ನು ಸಾಮಾನ್ಯವಾಗಿ ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ, ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳನ್ನು, ಅವುಗಳನ್ನು ರಚಿಸಿದ ಅನಂತರ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು, ಮತ್ತು ಸದರಿ ಅವಧಿಯು ಮುಕ್ತಾಯವಾಗುವ ಮುಂಚೆ ಎರಡು ಸದನಗಳ ಪೈಕಿ ಯಾವುದೇ ಸದನವು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ ಅಥವಾ ನಿಯಮವು ಪರಿಣಾಮಕಾರಿಯಾಗತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಮತ್ತು ಆ ಮಾರ್ಪಾಟುಗಳನ್ನು ಮತ್ತು ನಿರ್ದೇಶನಗಳನ್ನು ಇನ್ನೊಂದು ಸದನವು ಒಪ್ಪಿದರೆ, ತದನಂತರ, ಸಂದರ್ಭಾನುಸಾರ, ಆ ನಿಯಮಗಳು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

**9. ನಿರಸನ.–** ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವ, ಮೈಸೂರು ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮ, 1948 (ಮೈಸೂರು ಅಧಿನಿಯಮ 1948ರ LI) ಮತ್ತು ಮದ್ರಾಸ್ ಪ್ರದೇಶದಲ್ಲಿ ಜಾರಿಯಲ್ಲಿರುವ, ಮದ್ರಾಸ್ ಪ್ರಾಣಿಗಳ ಮತ್ತು ಪಕ್ಷಿ ಬಲಿಗಳ ಪ್ರತಿಬಂಧಕ ಅಧಿನಿಯಮ, 1950 (ಮದ್ರಾಸ್ ಅಧಿನಿಯಮ, 1950ರ XXXII) ಇವು ಈ ಮೂಲಕ ನಿರಸಿತವಾಗಿದೆ.

ಪರಂತು, ಮೈಸೂರು ಸಾಮಾನ್ಯ ಖಂಡಗಳ ಅಧಿನಿಯಮ, 1889ರ (ಮೈಸೂರು ಅಧಿನಿಯಮ, 1889ರ III) 6ನೇ ಪ್ರಕರಣವು, ಸದರಿ ನಿರಸನಕ್ಕೆ ಸಂಬಂಧಿಸಿ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8ನೇ ಪ್ರಕರಣ ಮತ್ತು 24ನೇ ಪ್ರಕರಣಗಳು ಮೈಸೂರು ಅಧಿನಿಯಮದಿಂದ ನಿರಸಿತವಾಗಿದ್ದರೆ ಮತ್ತು ಪುನಃ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**ಎ.ಎನ್. ಬ್ಯಾನರ್ಜಿ**
ಕರ್ನಾಟಕ ರಾಜ್ಯಪಾಲರು
ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಲಿಂಗಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ, (ಆಡಳಿತ–2)

**ನಂ.ಆರ್.ಡಿ.157 ಎಂ.ಎಸ್.ಟಿ. 60, ದಿನಾಂಕ:10ನೇ ಡಿಸೆಂಬರ್, 1966**

**ಅಧಿಸೂಚನೆ**

ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಅಧಿನಿಯಮದ (ಕರ್ನಾಟಕ ಅಧಿನಿಯಮ, 1960ರ 3) 8ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ. ಅದರ ಕರಡನ್ನು ಸದರಿ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, 1963ರ ಆಗಸ್ಟ್ 12ನೇ ದಿನಾಂಕದ ಕರ್ನಾಟಕ ರಾಜ್ಯ ಪತ್ರದ IV ಭಾಗದ 2 (i)ನೇ ವಿಭಾಗದಲ್ಲಿ 1963ರ ಆಗಸ್ಟ್ 12ನೇ ದಿನಾಂಕದ ಆರ್.ಡಿ. 157 ಎಂ.ಎಸ್.ಟಿ. 69ನೇ ನಂಬರಿನ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಎಂದರೆ.–

1. **ಹೆಸರು.–** ಈ ನಿಯಮಗಳನ್ನು ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ನಿಯಮಗಳು 1963 ಎಂದು ಕರೆಯತಕ್ಕದ್ದು.

2. **ಪರಿಭಾಷೆಗಳು.–** ಈ ನಿಯಮಗಳಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ.–

(ಕ) "ಅಧಿನಿಯಮ" ಎಂದರೆ, ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಅಧಿನಿಯಮ, 1959:

(ಖ) "ಸಂಹಿತೆ" ಎಂದರೆ, ದಂಡ ಪ್ರಕ್ರಿಯಾ ಸಂಹಿತೆ, 1898.

3. **ದೇವಾಲಯಗಳಲ್ಲಿ ನಡೆಯುವ ಪ್ರಾಣಿ ಬಲಿಗಳ ಬಗೆಗಿನ ಮಾಹಿತಿಯನ್ನು ತೀರ ಸಮೀಪದ ಪೊಲೀಸು ಠಾಣೆಗೆ ತಿಳಿಸತಕ್ಕದ್ದು,–** ದೇವಾಲಯದ ನ್ಯಾಸಧಾರಿಯು, ವ್ಯವಸ್ಥಾಪಕನು ಅಥವಾ ನೌಕರನು ಅಥವಾ ಭಕ್ತನು ಅಥವಾ ದೇವಾಲಯದಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಯು ಅಥವಾ ಇತರ ಯಾವನೇ ವ್ಯಕ್ತಿಯು, ಆ ದೇವಾಲಯಕ್ಕೆ ತೀರ ಸಮೀಪದಲ್ಲಿರುವ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಗೆ, ಹಿಂದೂ ದೇವಾಲಯದಲ್ಲಿ ಅಥವಾ ಅದರ ಆವರಣದೊಳಗೆ ನಡೆಯುವ ಪ್ರಾಣಿಬಲಿಗಳ ಬಗ್ಗೆ ಮೌಖಿಕವಾಗಿ ಅಥವಾ ಲಿಖಿತವಾಗಿ ದೂರು ಕೊಡಬಹುದು ಮತ್ತು ಹಾಗೆ ದೂರುಬಂದ ಮೇಲೆ ಅಥವಾ ತಾನಾಗಿಯೇ ಆ ಪೊಲೀಸು ಅಧಿಕಾರಿಯು ಈ ಅಧಿನಿಯಮದ ಮತ್ತು ಸಂಹಿತೆಯ ಉಪಬಂಧಗಳಿಗನುಸಾರವಾಗಿ ಅವಶ್ಯಕವಾದ ಕ್ರಮವನ್ನು ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಪಿ.ವಿ. ರಾಮಕೃಷ್ಣ**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ರೆವಿನ್ಯೂ ಇಲಾಖೆ.

ಸರ್ಕಾರಿ ಮುದ್ರಣಾಲಯ, ಬೆಂಗಳೂರು.